

# ಅದು ಬಸ್ಸಲ್ಲ; ಜೀವನದ ಹಾಸ್ಯ!

■ ಗಾಯತ್ರಿ ಎಸ್.ಎನ್.

ನಮ್ಮೂರಿಗೆ ಬಸ್ ಬಂದ ದಿನವನ್ನು ಊರಿನ ಜನ ಇನ್ನೂ ಹಬ್ಬದಂತೆ ನೆನಪಿಸಿಕೊಳ್ಳುತ್ತಾರೆ. ಅದಕ್ಕೂ ಮೊದಲು ನಮ್ಮ ಊರಿನವರಿಗೆ ಬಸ್ ಅಂದರೆ ಪಕ್ಕದ ಊರಿನ ಕಥೆ. ಆದರೆ ಬಸ್ ಬಂದ ಮೇಲೆ ನಮ್ಮ ಊರು ಸಿಟಿ ಆಗಿಬಿಟ್ಟಂತಾಯಿತು ಎಂಬ ಭಾವನೆ ಎಲ್ಲರಿಗೂ. ಆದರೆ ಆ ಬಸ್ಸಿನ ನಿಜವಾದ ಕಥೆ ಆರಂಭವಾಗುವುದೇ ಅಲ್ಲಿಂದ!

ನಮ್ಮೂರ ಬಸ್ ನೋಡಲು ಹೋದರೆ ಅದು ಬಸ್‌ಗಿಂತ ಒಂದು ಚಲಿಸುವ ಜಾತ್ರೆಯಂತೆಯೇ ಕಾಣುತ್ತದೆ. ಬಸ್ಸಿನ ಬಣ್ಣ ಯಾವುದು ಎಂದು ಕೇಳಿದರೆ, ಉತ್ತರ ಒಂದೇ– 'ಮೊದಲು ಏನಿತ್ತೋ, ಈಗ ಏನಿದೆಯೋ ದೇವರಿಗೇ ಗೊತ್ತು!' ಮುಂದೆ ಹಳೆಯ ಹಸಿರು, ಹಿಂದೆ ಮಸುಕಾದ ನೀಲಿ, ಮಧ್ಯೆ ಜಾಹೀರಾತುಗಳ ಕಾಗದ, ಅದರ ಮೇಲೆ 'ಸ್ವಚ್ಛತೆ ನಮ್ಮೆಲ್ಲರ ಕರ್ತವ್ಯ' ಎಂಬ ಬರಹ. ಸ್ವಚ್ಛತೆ ಬಗ್ಗೆ ಬಸ್ ಹೇಳುತ್ತದೆ, ಆದರೆ ಅದರೊಳಗಿನ ದೂಳು ಕೇಳಿದರೆ 'ನಾನೂ ಈ ಬಸ್ಸಿನ ಶಾಶ್ವತ ನಿವಾಸಿ' ಎನ್ನುತ್ತದೆ. ಬಸ್ಸು ನಿಗದಿತ ಸಮಯಕ್ಕೆ ಬರುತ್ತದೆ ಎಂದು ಯಾರೂ ನಿರೀಕ್ಷೆ ಮಾಡೋದಿಲ್ಲ. ಅದು ಬರುವುದು ಸಮಯಕ್ಕೆ ಅಲ್ಲ, ಅದರ ಮನಸ್ಸಿಗೆ. ಕೆಲವೊಮ್ಮೆ ಬಸ್ ಸ್ಟಾಪ್‌ನಲ್ಲಿ ಅರ್ಧ ಗಂಟೆ ನಿಂತರೂ ಬಸ್ ಬರುವುದಿಲ್ಲ. ಜನರು ಚರ್ಚೆ ಶುರುಮಾಡುತ್ತಾರೆ.

'ಇವತ್ತು ಬಸ್ ಬರೋದಿಲ್ಲ ಅಂತೆ'

'ಇಲ್ಲಾ, ಡ್ರೈವರ್‌ಗೀಗಷ್ಟೇ ಚಹಾ ಕುಡೀತಾ ಇದ್ದಾನೆ ಅಂತೆ'

ಅಷ್ಟರಲ್ಲಿ ದೂರದಿಂದ ದೂಳಿನ ಮೋಡ ಎದ್ದು, ಜನರ ಮುಖದಲ್ಲಿ ನಗು ಮೂಡುತ್ತದೆ. ಬಸ್ ಬಂತು ಅನ್ನೋದು ಅದರ ಹಾರ್ನ್‌ನಿಂದಲ್ಲ, ಅದು ಬರುವುದಕ್ಕಿಂತ ಮೊದಲು ಎದ್ದು ಬರುವ ದೂಳಿನಿಂದಲೇ ಗೊತ್ತಾಗುತ್ತದೆ! ನಮ್ಮೂರ ಬಸ್ಸಿನ ಡ್ರೈವರ್ ಸಾಹಸಪ್ರಿಯ ವ್ಯಕ್ತಿ. ಅವನು ಬಸ್ ಓಡಿಸೋದು ಅಂದರೆ, ರೇಸ್‌ನಲ್ಲಿ ಪಾಲ್ಗೊಂಡಂತೆ. ಮುಂದೆ ಹಸು ಇದ್ದರೂ, 'ಸೈಡ್ ಕೊಡು!' ಅನ್ನೋ ಸ್ಟೈಲ್‌ನಲ್ಲಿ ಹಾರ್ನ್ ಹಾಕುತ್ತಾನೆ. ಕಂಡಕ್ಟರ್ ಅವನ ಪಕ್ಕದಲ್ಲೇ ನಿಂತು, 'ನಿಧಾನ, ನಿಧಾನ' ಅಂತ ಹೇಳುತ್ತಿರುತ್ತಾನೆ. ಆದರೆ ಡ್ರೈವರ್‌ಗೆ ಅದು ಸಂಗೀತದಂತೆ ಕೇಳಿಸುತ್ತದೆ.

ಕಂಡಕ್ಟರ್ ನಮ್ಮೂರ ಬಸ್ಸಿನ ಜೀವ. ಅವನ ಕೈಯಲ್ಲಿ ಟಿಕೆಟ್ ಬುಕ್ ಅಲ್ಲ, ಒಂದು ಮಾಯಾಜಾಲದ ಪುಸ್ತಕ. 'ಚಿಲ್ಲರೆ ಇಲ್ಲ' ಅನ್ನೋದು ಅವನ ಶಾಶ್ವತ ವಾಕ್ಯ. ಐದು ರೂಪಾಯಿ ಕೊಟ್ಟರೆ, 'ಮುಗಿತು, ಇಳಿಯುವಾಗ ಕೊಡ್ತೀನಿ' ಅಂತ ಹೇಳಿ, ಪ್ರಯಾಣ ಮುಗಿದ ಮೇಲೂ ಮರೆತುಬಿಡುತ್ತಾನೆ. ಯಾರಾದರೂ ಕೇಳಿದರೆ, 'ನೀನೇ ಕೊಟ್ಟಿಲ್ಲವಲ್ಲ' ಅನ್ನೋ ಮುಖಭಾವ. ಕೆಲವೊಮ್ಮೆ ಅವನು ಬಸ್ಸಿನಲ್ಲೇ ಸುದ್ದಿ ವಾಹಿನಿಯಂತೆ ಯಾರು ಯಾರಿಗೆ ಮದುವೆ, ಯಾರು ಯಾರಿಗೆ ಜಗಳ, ಎಲ್ಲವೂ ಅವನ ಮೂಲಕವೇ ಊರಿಗೆ ತಲುಪುತ್ತದೆ.

ಬಸ್ಸಿನೊಳಗಿನ ಪ್ರಯಾಣ ಇನ್ನೂ ರಸದಾಯಕ. ಒಂದು ಕಡೆ ಶಾಲಾ ಮಕ್ಕಳು, ಇನ್ನೊಂದು ಕಡೆ ತರಕಾರಿ ಚೀಲ ಹಿಡಿದ ಅಜ್ಜಿಯರು, ಮಧ್ಯೆ ಕಾಲೇಜು ಹುಡುಗರು, ಮುಂದೆ ದೇವರ ಫೋಟೊ, ಹಿಂದೆ ಲೌಡ್ ಸ್ಪೀಕರ್. ಬಸ್ ಸ್ಟಾರ್ಟ್ ಆದ ಕ್ಷಣದಲ್ಲೇ 'ಅಯ್ಯೋ ಜಾಗ ಬಿಡಿ' ಎಂಬ ಧ್ವನಿ ಕೇಳಿಸುತ್ತದೆ. ಯಾರ ಕಾಲು ಯಾರ ಮೇಲೆ ಇದೆ ಅನ್ನೋದು ಯಾರಿಗೂ ಗೊತ್ತಿಲ್ಲ. ಆದರೆ ಎಲ್ಲರೂ ಒಂದೇ ಮಾತು ಹೇಳುತ್ತಾರೆ—'ಇದು ನಮ್ಮೂರ ಬಸ್, ಹೊಂದಿಕೊಳ್ಳಬೇಕು'.

ನಮ್ಮೂರ ಬಸ್ಸಿಗೆ ನಿಲ್ದಾಣಗಳೇ ಒಂದು ವಿಶೇಷ. ಅಧಿಕೃತ ಬಸ್ ಸ್ಟಾಪ್ ಇದ್ದರೂ, ಬಸ್ ನಿಲ್ಲೋದು ಮಾತ್ರ ಚಹಾ ಅಂಗಡಿ, ಟೈರ್ ಪಂಚರ್ ಅಂಗಡಿ, ಅಥವಾ ಡ್ರೈವರ್‌ಗೆ ಪರಿಚಯ ಇರುವ ಮನೆ ಮುಂದೆ. 'ಇಲ್ಲಿ ನಿಲ್ಲಿಸೋದು ಯಾಕೆ?' ಅಂತ ಕೇಳಿದರೆ, 'ಅಲ್ಲಿ ಇಳಿಯೋರಿದ್ದಾರೆ' ಅನ್ನೋ ಸರಳ ಉತ್ತರ.

ಹಬ್ಬದ ದಿನಗಳಲ್ಲಿ ಬಸ್ಸಿನ ಸ್ಥಿತಿ ಹೇಳೋದೇ ಬೇಡ. ಒಳಗೆ ಜನ, ಮೇಲೆ ಸಾಮಾನು, ಕೆಲವೊಮ್ಮೆ ಕೋಳಿ ಪೆಟ್ಟಿಗೆಗಳೂ! ಬಸ್ಸು ಓಡುತ್ತಿದೆಯೋ, ಜನರು ಬಸ್ಸನ್ನು ಹೊತ್ತುಕೊಂಡು ಹೋಗ್ತಿದಾರೋ ಅನ್ನೋ ಸಂಶಯ ಬರುತ್ತದೆ. ಆದರೂ ಬಸ್ಸು ನಿಂತಾಗ ಎಲ್ಲರೂ ಸುರಕ್ಷಿತವಾಗಿ ಇಳಿದರೆ, ಅದೇ ಒಂದು ಸಾಧನೆ.

ಈ ಎಲ್ಲ ಹಾಸ್ಯ, ಗದ್ದಲ, ಗೊಂದಲಗಳ ನಡುವೆಯೂ ನಮ್ಮೂರ ಬಸ್ಸು ನಮಗೆ ಬಹಳ ಪ್ರೀತಿ. ಅದು ನಮ್ಮ ಊರನ್ನು ಜಗತ್ತಿಗೆ ಜೋಡಿಸುವ ಸೇತುವೆ. ಮಳೆ, ಬಿಸಿಲು, ದೂಳು ಯಾವುದನ್ನೂ ಲೆಕ್ಕಿಸದೇ ನಮ್ಮನ್ನು ಹೊತ್ತುಕೊಂಡು ಹೋಗುತ್ತದೆ. ಅದರಲ್ಲಿರುವ ತೊಂದರೆಗಳೇ ಅದರ ಸೌಂದರ್ಯ. ಹಾಗಾಗಿ ಯಾರಾದರೂ 'ನಮ್ಮೂರ ಬಸ್ ಹೇಗಿದೆ?' ಅಂತ ಕೇಳಿದರೆ, ನಾವು ಹೆಮ್ಮೆಯಿಂದ ಹೇಳ್ತೀವಿ– ಅದು ಬಸ್ಸಲ್ಲ ಅದು ನಮ್ಮೂರ ಜೀವನದ ಹಾಸ್ಯ ಕಥೆ! ಅಂತ.

ಪ್ರತಿಕ್ರಿಯಿಸಿ:
feedback@sudha.co.in